ಸಿ.ಸಿ ನಂಬ್ರ: 420/2023
ಪಿ.ಡಬ್ಲ್ಯೂ : 1

ದಿನಾಂಕ: 04-08-2026 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಗಿದೆ

ಮುಂದುವರಿದ ಪಾಟೀ ಸವಾಲು: ಆರೋಪಿ ಪರ ಶ್ರೀ ಪಿ ಜೆ ಎಸ್ ವಕೀಲರಿಂದ

1. ಕುಂದಾಪುರ ನ್ಯಾಯಾಲಯದಲ್ಲಿ ಕಳೆದ ಬಾರಿ ಹೇಳಿದಂತೆ 2012 ರಿಂದ ಇವತ್ತಿನವರೆಗೂ ಕೇವಲ 10-12 ಪ್ರಕರಣಗಳನ್ನು ದಾಖಲಿಸಿರುವುದಿಲ್ಲ, 29 ಪ್ರಕರಣಗಳನ್ನು ದಾಖಲಿಸಿರುತ್ತೇನೆ ಎಂದರೆ ಸಾಕ್ಷಿ ಇರಬಹುದು, ಕೆಲವು ಮುಗಿದಿರುತ್ತದೆ ಎಂದು ನುಡಿಯುತ್ತಾರೆ. ನಾನು ಎಲ್ಲರ ಸಹಿಗಳನ್ನು ಚೆಕ್ ನಲ್ಲಿ ಹಾಕಿಸಿಕೊಂಡು ಮೋಸ ಮಾಡಿ ಈ ಪ್ರಕರಣಗಳನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಹಣಕಾಸಿನ ವ್ಯವಹಾರ ಹೇಗೆ ಮಾಡಬೇಕೆಂಬ ಮಾಹಿತಿ ಇರುತ್ತದೆ. ವ್ಯವಹಾರ ಜ್ಞಾನ ಇದ್ದರೂ ಸಹ ಪ್ರತಿಯೊಂದು ಕೇಸ್ ನಲ್ಲಿ ಸಹ ನಾನು ನಗದು ಹಣ ಕೊಟ್ಟಿದ್ದೆ ಅದಕ್ಕೆ ಅವರು ಚೆಕ್ ಕೊಟ್ಟಿರುತ್ತಾರೆ ಎಂದು ಹೇಳುತ್ತಿದ್ದೇನೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

2. ನನಗೆ ಹಣ ಬರಬೇಕಿದ್ದರೆ ನನ್ನ ಆದಾಯ ತೆರಿಗೆ ಪಾವತಿಯಲ್ಲಿ ಇಂತಿಷ್ಟು ಹಣ ಸತೀಶ್ ಭಂಡಾರಿಯವರಿಂದ ಬರಬೇಕಿತ್ತು ಎಂದು ನಮೂದಿಸುತ್ತಿದ್ದೆ ಎಂದರೆ ಸರಿಯಲ್ಲ. ನನ್ನಿಂದ ಆರೋಪಿತ ಯಾವತ್ತೂ ಕೂಡ ಹಣ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಸತೀಶ್ ಭಂಡಾರಿಯವರು ಅವರ ಅಂಗಡಿಯ ಮಾಲೀಕರಿಗೆ ಕೊಟ್ಟಂತಹ ಖಾಲಿ ಸಹಿ ಮಾಡಿದ ಚೆಕ್ ನ್ನು ದುರುಪಯೋಗ ಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

3.ದೂರಿನಲ್ಲಿ ತಾನು ಸಾಕಷ್ಟು ಬಾರಿ ಆರೋಪಿಗೆ ಹಣ ಮರುಪಾವತಿ ಬಗ್ಗೆ ಕೇಳಿದಾಗ ಆತ ನನಗೆ ಚೆಕ್ ಕೊಟ್ಟಿರುತ್ತಾನೆ ಎಂದು ನಮೂದು ಮಾಡಿರುವುದು ತಪ್ಪು ಎಂದರೆ ಸರಿಯಲ್ಲ. ಸಾಕ್ಷಿ ಪುನಃ ನನ್ನ ದೂರಿನಲ್ಲಿ ಹಾಗೂ ಮುಖ್ಯ ವಿಚಾರಣೆಯಲ್ಲಿ ಬರೆದಿರುವುದು ಸರಿಯಲ್ಲ ಎಂದು ನುಡಿಯುತ್ತಾರೆ. ವಕೀಲರ ಮುಖಾಂತರ ಕೊಟ್ಟ ನೋಟಿಸಿನಲ್ಲಿ ಆ ರೀತಿ ಬರೆದಿದ್ದರೆ ತಪ್ಪು ಎಂದರೆ ಸಾಕ್ಷಿ ನನಗೆ ಆ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

4. ನನಗೆ ಅರೋಪಿತ ಯಾವುದೇ ಹಣ ಕೊಡಲು ಇರುವುದಿಲ್ಲ ಹಾಗೂ ಆರೋಪಿತನ ವಿರುದ್ಧ ಸುಳ್ಳು ಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಒಂದು ಬಾರಿ ಆತ ನನಗೆ ಹಣ

ಕೊಡುವುದು ಇದ್ದಿದ್ದರೆ ಆದರೆ ನನ್ನ ದೂರು ಹಾಗೂ ನೋಟಿಸಿನಲ್ಲಿ ಸರಿಯಾಗಿ ನಮೂದುಸುತ್ತಿದ್ದೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ.

ಓ.ಹೇ.ಕೇ.ಸ.ಇದೆ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ